<u>**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ**</u>

**ಸಿ.ಸಿ. ಸಂಖ್ಯೆಃ 225/2020**

**ದಿನಾಂಕಃ 06-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಸಿಡಬ್ಲೂ- | 07 |
| ಪಿಡಬ್ಲೂ- | 07 |

| | |
|---|---|
| ಹೆಸರು | ಮುದುಕಪ್ಪ |
| ತಂದೆ | ಸಿದ್ದಪ್ಪ |
| ವಯಸ್ಸು | 64 ವರ್ಷ |
| ಕೆಲಸ | ನಿವೃತ್ತ ಎ.ಎಸ್.ಐ |
| ವಾಸಸ್ಥಳ | ಕೊಪ್ಪಳ |

<u>**ಮುಖ್ಯ ವಿಚಾರಣೆ : ಹಿರಿಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**</u>

ನಾನು ಕೊಪ್ಪಳ ನಗರ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಮೇ 2015 ರಿಂದ 2020 ಮೇ ವರೆಗೆ ಕೆಲಸ ಮಾಡಿದ್ದೇನೆ, ಆಸಂದರ್ಬದ ದಿಃ- 03-04-2020 ರ ಮದ್ಯಾಹ್ನ 1 ಗಂಟೆ ಸುಮಾರಿಗೆ ಪ್ರಭಾಕರ ಭಟ್ಟ ಎಂಬ ಕೊಪ್ಪಳ ತಹಶೀಲ್ದಾರ ಕಚರೀಯಿಂದ ಗಣಿಕೀಕೃತ ಒಂದು ಫಿರ್ಯಾದಿಯನ್ನು ಕೊಟ್ಟರು, ಸದರಿ ಫಿರ್ಯಾದಿಯ ಆಧಾರದ ಮೇಲೆ ನಾನು ಭಾ.ದಂ.ಸಂಹಿತೆ ಕಲಂ 420, 465, 468 ರಡಿ ಅಪರಾಧ ಸಂಖ್ಯೆ 42/2020 ದಾಖಲಿಸಿ ನ್ಯಾಯಾಲಯಕ್ಕೆ ಪ್ರ.ವ.ವರದಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ.

2. ಫಿರ್ಯಾದಿಯೊಂದಿಗೆ ಕೊಪ್ಪಳದ ಜಮೀನು ಸರ್ವೆ ನಂ. 271/1 ಕ್ಷೇತ್ರ 5 ಎಕರೆ ಗೆ ಸಂಬಂದಪಟ್ಟಂತೆ ನರಸಪ್ಪ ತಂದೆ ವೆಂಕಪ್ಪ ಇವರ ಹೆಸರಿನಲ್ಲಿರುವ 2020 ನೇ ಸಾಲಿನ ಪಹಣಿ ಪತ್ರಿಕೆ ಜರಾಕ್ಸ ಪ್ರತಿ, ಇನ್ನೊಂದು ಅದೇ ಜರಾಕ್ಸ ಪಹಣಿ ಪತ್ರಿಕೆ ಪ್ರತಿ ನರಸಪ್ಪ ತಂದೆ ವೆಂಕಪ್ಪ ಗಾಳಿ, ತಹಶೀಲ್ದಾರ ಕೊಪ್ಪಳ ಇವರು ಫಿರ್ಯಾದಿ ಕೊಡಲು ಹೇಳಿ ಮಾಡಿದ ಆದೇಶದ ಜರಾಕ್ಸ ಪ್ರತಿ, ಒಟ್ಟು 16 ನೊಟಿಸನ ಜರಾಕ್ಸ ಪ್ರತಿಗಳು ಕೊಟ್ಟರು. ವಕೀಲರಿಗೆ ಕೊಟ್ಟ ಪ್ರತ್ಯುತ್ತರ ನೊಟಿಸನ ಪ್ರತಿ ಇವಳನ್ನು ಕೊಟ್ಟಿದ್ದರು. ಸದರಿ ಫಿರ್ಯಾದಿ ಮೇಲಿನ ಸಹಿಯನ್ನು ನಿಪಿ 9(ಬಿ) ಎಂದು ಗುರುತಿಸಲಾಯಿತು. ಎಫ್ ಐ ಆರ್ ಪ್ರತಿ ನಿಪಿ 11 ಎಂದು ಸಹಿಯನ್ನು ನಿಪಿ 11(ಎ) ಎಂದು ಗುರುತಿಸಲಾಯಿತು.

3. ಮುಂದಿನ ತನಿಖೆಗಾಗಿ ಸದರಿ ಕಡತವನ್ನು ಹೆಚ್ ಸಿ ಖಾಜಾಸಾಬರವರಿಗೆ ವಹಿಸಿಕೊಟ್ಟೆ.

**ಪಾಟೀ ಸವಾಲು : ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

**(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.
ಸಹಿ/-
**ಸಿ.ಜೆ.ಎಮ್., ಕೊಪ್ಪಳ.**